ಪಡೆದ ಪೊಲೀಸರು, ಯಾರೂ ಸಿಗದಿದ್ದಾಗ ಕೇಸು ದಾಖಲಿಸಿದರು. ಹಲವು ವರ್ಷ ಶಿಕ್ಷೆ ಅನುಭವಿಸಿರುವ ಸುಂದರೇಶ್, ಕೆಲ ಸಂಘಟನೆಗಳ ಕಾನೂನು ನೆರವಿನಿಂದ ಈಗ ಹೊರಬಂದಿದ್ದಾರೆ.

**ಘಟನೆ 4**

ಕೋರಮಂಗಲ ಜಕ್ಕಸಂದ್ರ ನಿವಾಸಿ ಚಂದ್ರಣ್ಣ (ಹೆಸರು ಬದಲು) ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾದವರು. ಅವರೀಗ 14 ವರ್ಷ ಜೈಲು ಶಿಕ್ಷೆ ಅನುಭವಿಸಿ ಹೊರಬಂದಿದ್ದಾರೆ. ಅವರು ಜೈಲಿನಲ್ಲಿದ್ದಾಗ ಕುಟುಂಬಕ್ಕೆ ಬೇರೆ ಆಸರೆ ಇರಲಿಲ್ಲ. ಅವರ ಇಬ್ಬರು ಹೆಣ್ಣುಮಕ್ಕಳು ಆಗಿನ್ನು ಹಸುಗೂಸುಗಳು. ಮಕ್ಕಳ ಶಿಕ್ಷಣಕ್ಕಾಗಿ ಅವರ ಪತ್ನಿ ಪಡಬಾರದ ಕಷ್ಟಪಟ್ಟಿದ್ದಾರೆ. ಅವರ ಇಬ್ಬರು ಹೆಣ್ಣುಮಕ್ಕಳ ಶಿಕ್ಷಣ ಅರ್ಧದಲ್ಲೇ ಮೊಟಕಾಗಿದೆ. ತನ್ನ ಕಾರಣದಿಂದಾಗಿ ಮಕ್ಕಳಿಗೆ ಸರಿಯಾದ ಶಿಕ್ಷಣ ಸಿಗಲಿಲ್ಲ ಎಂಬ ಕೊರಗು ಚಂದ್ರಣ್ಣ ಅವರಿಗೆ ಈಗಲೂ. ಜೈಲಿನಲ್ಲಿದ್ದಾಗ ಅವರ ಕುಟುಂಬ ಬಡತನ, ಹಸಿವು, ಅಪಮಾನದ ಕೂಪದಲ್ಲಿ ಬೆಂದುಹೋಗಿತ್ತು. ಈಗ ಚಂದ್ರಣ್ಣ, ಟೈಲರಿಂಗ್ ವೃತ್ತಿ ಮಾಡಿಕೊಂಡು ಜೀವನ ದೂಡುತ್ತಿದ್ದಾರೆ.

**ಘಟನೆ 5**

‘ದರೋಡೆ ಪ್ರಕರಣವೊಂದರಲ್ಲಿ 27 ವರ್ಷದ ಮಗ ಜೈಲಿನಲ್ಲಿದ್ದಾನೆ. ಸೊಸೆ ತೀರಿಹೋಗಿದ್ದಾಳೆ. 6 ವರ್ಷದ ಮೊಮ್ಮಗಳ ಲಾಲನೆ–ಪಾಲನೆ ನನ್ನದೇ. ಪತಿ ಕ್ಷಯರೋಗಿ. ದುಡಿಮೆ ಇಲ್ಲ’.

ಇಳಿವಯಸ್ಸಿನ ಬ್ಯಾಡರಹಳ್ಳಿ ಮುನಿಯಮ್ಮ (ಹೆಸರು ಬದಲು) ಗದ್ಗದಿತರಾದರು. ಕಲ್ಯಾಣ ಮಂಟಪದಲ್ಲಿ ಕೂಲಿ ಕೆಲಸ ಮಾಡಿಕೊಂಡು ಸಂಸಾರದ ನೊಗ ಹೊತ್ತಿದ್ದಾರೆ. ಮೊಮ್ಮಗಳನ್ನು ಶಾಲೆಗೆ ಕಳುಹಿಸಿದರೆ ‘ನಿನ್ನ ಅಪ್ಪ ಕಳ್ಳ. ನೀನು ಕಳ್ಳಿ’ ಎಂದು ಹೀಯಾಳಿಸುತ್ತಾರೆ. ಈ ಸ್ಥಿತಿ ಯಾರಿಗೂ ಬೇಡ ಎಂದು ಆ ವಯೋವೃದ್ಧೆ ಕೈ ಮುಗಿದರು.

ಮೇಲಿನ ಐದು ಘಟನೆಗಳು ಅಪರಾಧ ಜಗತ್ತಿನೊಂದಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಸಂಬಂಧ ಹೊಂದಿವೆ. ತಮ್ಮ ತಪ್ಪೇನೂ ಇಲ್ಲದಿದ್ದರೂ ಬಲಿಪಶುಗಳಾದವರೂ ಇದ್ದಾರೆ. ಹಲವು ಕಾರಣಗಳಿಗಾಗಿ ಜೈಲು ಸೇರಿರುವ ಮಗನಿಗಾಗಿ ಪರಿತಪಿಸುವ ಒಂಟಿ ತಾಯಂದಿರು, ಸೆರೆವಾಸದಲ್ಲಿರುವ ವ್ಯಕ್ತಿಗಳ ಪತ್ನಿಯರು, ಮಕ್ಕಳು ಪರಿತಪಿಸುವ ಘಟನೆಗಳು ಹೃದಯ ಕಲುಕದಿರದು.

ಇವರೆಲ್ಲ ಈಗ ತಮ್ಮ ಹಕ್ಕುಗಳಿಗಾಗಿ ದನಿಗೂಡಿಸಿದ್ದಾರೆ. ‘ನ್ಯಾಯಕ್ಕಾಗಿ ಸೆರೆವಾಸಿ ಕುಟುಂಬಸ್ಥರ ಸಂಘ’ ಸ್ಥಾಪನೆ ಮಾಡಿಕೊಂಡಿದ್ದಾರೆ. ಮೂರು ವರ್ಷಗಳ ಹಿಂದೆ ಸಂಘ ಸ್ಥಾಪನೆಯಾಗಿದೆ. ಅಮಾಯಕರು ವಿನಾಕಾರಣ ಪೊಲೀಸ್ ಕೇಸಿನಲ್ಲಿ ಸಿಕ್ಕಿಬೀಳದಂತೆ ಅರಿವು ಮೂಡಿಸುವುದು ಸಂಘದ ಪ್ರಮುಖ ಉದ್ದೇಶ. ಸೆರೆವಾಸದಲ್ಲಿರುವ ವ್ಯಕ್ತಿಗಳ ಕುಟುಂಬಗಳಿಗೆ ಕಾನೂನು ನೆರವು, ಆರ್ಥಿಕ ಉಪಕ್ರಮ, ಮಕ್ಕಳ ಶಿಕ್ಷಣ, ಅರಿವು, ವಿವೇಕ ಬೆಳೆಸಿಕೊಳ್ಳಲು ಸಂಘ ನೆರವು ನೀಡುತ್ತಿದೆ. ಅಪರಾಧ ಚಟುವಟಿಕೆಗಳಿಂದ ದೂರವಿರುವಂತೆ ಬೀದಿ ನಾಟಕಗಳ ಮೂಲಕವೂ ಜಾಗೃತಿ ಮೂಡಿಸುತ್ತಿದೆ. ಸಂತ್ರಸ್ತರೇ ಇದರ ಸದಸ್ಯರಾಗಿರುವುದರಿಂದ, ಇತರ ಸಂತ್ರಸ್ತರ ನೋವು ಅರ್ಥ ಮಾಡಿಕೊಳ್ಳಲು ಸಾಧ್ಯ ಎನ್ನುತ್ತಾರೆ ಸಂಘದ ಸಂಚಾಲಕರಾದ ಗುಂಡಪ್ಪ ಮತ್ತು ಚಂದ್ರಶ್ರೀ.

ಕಾನೂನು ಸಂಘರ್ಷವೇ ಇಲ್ಲಿ ಮುಖ್ಯ. ಈ ಸಂಘಕ್ಕೆ ವಕೀಲರಾದ ನೆಲ್ಸನ್ ಪಿ. ರಾಜ್ ಮತ್ತು ವಂದನಾ ಕಾನೂನು ನೆರವು ಒದಗಿಸುತ್ತಿದ್ದಾರೆ. ವಕೀಲರಿಗೆ ಫೀಜು ಕಟ್ಟಲು ಸಾಧ್ಯವಾಗದ ಸೆರೆವಾಸಿಗಳು ಎಷ್ಟೋ ಮಂದಿ ಇದ್ದಾರೆ. ತಮ್ಮದಲ್ಲದ ತಪ್ಪಿನಿಂದ ಸೆರೆವಾಸದಲ್ಲಿರುವ ಕೆಲವರಿಗೆ ಉಚಿತ ಕಾನೂನು ನೆರವು ಒದಗಿಸುವ ಕೆಲಸವನ್ನು ನೆಲ್ಸನ್, ಅವರ ತಂಡ ಮಾಡುತ್ತಿದೆ.



ಅಪರಾಧ ಚಟುವಟಿಕೆ ಕುರಿತು ಜನರಿಗೆ ಅರಿವು

ಸುಪ್ರೀಂ ಕೋರ್ಟ್, ಆಯಾ ರಾಜ್ಯಗಳ ಹೈಕೋರ್ಟ್‌ಗಳು ಸೆರೆವಾಸಿಗಳ ಹಕ್ಕುಗಳನ್ನು ಎತ್ತಿಹಿಡಿದಿವೆ. ಉಚಿತ ಕಾನೂನು, ಜಾಮೀನು ಪಡೆಯಲು ಅವಕಾಶವಿದೆ. ನಿಷ್ಪಕ್ಷಪಾತ ವಿಚಾರಣೆ, ಪೊಲೀಸ್ ದೌರ್ಜನ್ಯ ವಿರೋಧಿಸುವುದು, ಸೆರೆವಾಸಿಯು ಘನತೆಯಿಂದ ಬದುಕುವುದು — ಎಲ್ಲಕ್ಕೂ ಕಾನೂನಿನಲ್ಲಿ ಅವಕಾಶವಿದೆ. ಸೆರೆವಾಸಿಗೆ ತನ್ನ ಕುಟುಂಬದೊಂದಿಗೆ ಸಂಪರ್ಕ ಇಟ್ಟುಕೊಳ್ಳುವ ಹಕ್ಕಿದೆ. ಪೊಲೀಸರು ಕಾನೂನುಬಾಹಿರವಾಗಿ ಬಂಧಿಸಿದರೆ ವಿರೋಧಿಸುವ ಹಕ್ಕೂ ಇದೆ ಎನ್ನುತ್ತಾರೆ ನೆಲ್ಸನ್.

ಕಾನೂನು ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು. ತಪ್ಪು ಮಾಡಿದರೆ ಶಿಕ್ಷೆಯಾಗಲಿ. ಆದರೆ, ತಪ್ಪು ಮಾಡದೆ ಇದ್ದರೂ ವಿನಾಕಾರಣ ಕೆಲವರು ಜೈಲಿನಲ್ಲಿ ಇದ್ದಾರೆ. ಇದು ಅನ್ಯಾಯ ಅಲ್ಲವೇ? ಈಗ ಹಕ್ಕುಗಳಿಗಾಗಿ ಅವರೆಲ್ಲ ದನಿ ಎತ್ತಿದ್ದಾರೆ ಎಂದು ಸಂಘದ ಸಲಹೆಗಾರ ಪ್ರೊ. ವೈ.ಜೆ. ರಾಜೇಂದ್ರ ಹೇಳುತ್ತಾರೆ. ಈ ಸಂಘದ ಪರಿಕಲ್ಪನೆ ರಾಜೇಂದ್ರ ಅವರದ್ದೇ.

ರಾಜೇಂದ್ರ ಅವರು ಸೇಂಟ್ ಜೋಸೆಫ್ ಕಾಲೇಜಿನ ಸಮಾಜ ಕಾರ್ಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದು, ಅವರ ವಿದ್ಯಾರ್ಥಿನಿ ರಿನಿ ಮಾರ್ಟಿನ್, ಸೆರೆವಾಸಿ ಕುಟುಂಬಸ್ಥರ ಕುರಿತು ಅಧ್ಯಯನ ನಡೆಸಿದ್ದರು. ಪೊಲೀಸ್ ಕಿರುಕುಳ, ಕಾನೂನು ಸಂಘರ್ಷ, ಆರ್ಥಿಕ ಅಭದ್ರತೆ, ಸಾಮಾಜಿಕ ತಾರತಮ್ಯ, ಸೇರಿದಂತೆ ಹಲವು ಅಂಶಗಳು ಸಂಶೋಧನೆಯಲ್ಲಿ ಬೆಳಕಿಗೆ ಬಂದವು. ಅದರ ಆಧಾರದ ಮೇಲೆ ಈ ಸಂಘ ರೂಪುಗೊಂಡಿತು. ಈಗ 200 ಕುಟುಂಬಗಳು ಸಂಘದೊಂದಿಗೆ ಸಂಪರ್ಕದಲ್ಲಿವೆ. 56 ಮಂದಿ ಸದಸ್ಯರಿದ್ದಾರೆ.

‘ತಂದೆಯೋ, ತಾಯಿಯೋ ತಪ್ಪು ಮಾಡಿ ಜೈಲು ಸೇರಿದರೆ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಒಬ್ಬ ತಪ್ಪು ಇಡೀ ಮನೆಯನ್ನೇ ಹಾಳು ಮಾಡುವುದು ಸರಿಯಲ್ಲ. ಈ ಉದ್ದೇಶದಿಂದಲೇ ಸಂಘ ಕಾನೂನಿನಡಿ ಪ್ರಜಾತಾಂತ್ರಿಕವಾಗಿ ಕೆಲಸ ಮಾಡುತ್ತಿದೆ. ಅಮಾಯಕರ ಪರ ದನಿ ಎತ್ತಿಯುವ ಕೆಲಸವನ್ನು ಸಂಘದ ಸದಸ್ಯರು ಮಾಡುತ್ತಿದ್ದಾರೆ. ಹಲವು ಮಾನವೀಯ ಪರ ಸಂಘಟನೆಗಳು ಈ ಕೆಲಸಕ್ಕೆ ಬೆಂಬಲವಾಗಿ ನಿಂತಿವೆ’ ಎನ್ನುತ್ತಾರೆ ರಾಜೇಂದ್ರ.

ಸೇಂಟ್ ಜೋಸೆಫ್ ಕಾಲೇಜಿನ ಕಾನೂನು ಹಾಗೂ ಸಮಾಜ ಕಾರ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗ ಹಾಗೂ ‘ಪ್ರಾರಂಭ’ ಎನ್‌ಜಿಒ ಜಂಟಿ ಪ್ರಯತ್ನದ ಭಾಗವಾಗಿ ಈ ಸಂಘ ಕಾರ್ಯನಿರತವಾಗಿದೆ. ಸದ್ಯಕ್ಕೆ ಬೆಂಗಳೂರಿಗೆ ಸೀಮಿತವಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ವಿಸ್ತರಿಸುವ ಉದ್ದೇಶವಿದೆ. ‘ನ್ಯಾಯ ಸಂಕಲ್ಪ’ ಎನ್ನುವ ಪತ್ರಿಕೆಯನ್ನು ಸಂಘ ನಡೆಸುತ್ತಿದೆ. ಮಾನವ ಹಕ್ಕುಗಳ ಉಲ್ಲಂಘನೆ, ಸಾಮಾಜಿಕ ತಾರತಮ್ಯ ಕೊನೆಗಾಣಿಸುವ ನಿಟ್ಟಿನಲ್ಲೂ ಅರಿವಿನ ಹೆಜ್ಜೆ ಇಟ್ಟಿದೆ.

ಪ್ರತಿಕ್ರಿಯಿಸಿ: feedback@sudha.co.in